2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಂದಾಪುರ

**ದಿನಾಂಕಃ 27 ನೇ ಫೆಬ್ರವರಿ 2025**

**- ಉಪಸ್ಥಿತರು -**

**ಶ್ರೀಮತಿ. ರೋಹಿಣಿ.ಡಿ** ಬಿ.ಎ., ಎಲ್.ಎಲ್.ಬಿ.,
*2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

*ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,* ಕುಂದಾಪುರ

**ಅಸಲು ದಾವೆ ಸಂಖ್ಯೆ: 153/2023**

ವಾದಿ : ಜ್ಯೋತಿ ಹೊಳ್ಳ
ವಯಸ್ಸು ಸುಮಾರು 45 ವರ್ಷ,
ಗಂಡಃ ವಿಶ್ವನಾಥ ಹೊಳ್ಳ
ವಾಸಃ ವಡೇರಹೋಬಳಿ ಗ್ರಾಮ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

(ಪ್ರತಿನಿಧಿಸಿದವರು – ಶ್ರೀ ಟಿ.ಜಿ.ಆರ್. ವಕೀಲರು)

**- ವಿರುದ್ಧ -**

ಪ್ರತಿವಾದಿ : ನಾಗರಾಜ ಬ್ರಾಸ್ರಿ
ವಯಸ್ಸು ಸುಮಾರು 60 ವರ್ಷ,
ತಂದೆಃ ಕಾಡಾ ಯಾನೆ ನರಸಿಂಹ ಬ್ರಾಸ್ರಿ
ವಾಸಃ ವಡೇರಹೋಬಳಿ ಗ್ರಾಮ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

(ಪ್ರತಿನಿಧಿಸಿದವರು – ಶ್ರೀ ಯು.ಎಸ್.ಎಸ್. ವಕೀಲರು)

**ಮಧ್ಯಂತರ ಅರ್ಜಿ ಸಂಖ್ಯೆಃ 2**

ಅರ್ಜಿದಾರರು : ಜ್ಯೋತಿ ಹೊಳ್ಳ

**- ವಿರುದ್ಧ -**

ಎದುರುದಾರರು : ನಾಗರಾಜ ಬ್ರಾಸ್ರಿ

**ಮಧ್ಯಂತರ ಅರ್ಜಿ ಸಂಖ್ಯೆ: 4**

**ಅರ್ಜಿದಾರರು :** ನಾಗರಾಜ ಬ್ರಾಸ್ತ್ರಿ

- ವಿರುದ್ಧ -

**ಎದ್ರುದಾರರು :** ಜ್ಯೋತಿ ಹೊಳ್ಳ

**ಮಧ್ಯಂತರ ಅರ್ಜಿ ಸಂಖ್ಯೆ: 2 ಮತ್ತು 4 ರ ಮೇಲೆ ಆದೇಶ**

ವಾದಿಯು ಪ್ರತಿವಾದಿಯ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ *39* ನಿಯಮ *1* ಮತ್ತು *2* ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ ದಾವಾ ಇತ್ಯರ್ಥವಾಗುವ ತನಕ ಪ್ರತಿವಾದಿರು ಹಾಗೂ ಅವರ ಸಂತತಿ ವಾರಿಸುದಾರರು ಅಧಿಕಾರ ಪತ್ರ ಹೊಂದಿದವರು ದಾವಾ ಸ್ವತ್ತಿನಲ್ಲಿರುವ ಶ್ರೀ ಪಡುವರಿ ವಿನಾಯಕ ದೇವಸ್ಥಾನ, ಬ್ರಾಸ್ತ್ರಿ ಮಠ, ವಡೇರ ಹೋಬಳಿ ಗ್ರಾಮ, ಸ್ಥಾಪನಾ ನಂಬ್ರ 104 ಕ್ಕೆ ಹಸ್ತಕ್ಷೇಪ ಮಾಡದಂತೆ ಹಾಗೂ ಯಾವುದೇ ರೀತಿಯ ಕಟ್ಟಡ ವಗೈರೆ ಕಟ್ಟದಂತೆ ತಾತ್ಕಾಲಿಕ ನಿರ್ಭಂದಕಾಜ್ಞೆಯ ಆದೇಶವನ್ನು ಕೋರಿರುತ್ತಾರೆ.

ಪ್ರತಿವಾದಿಯು ವಾದಿಯ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ *151* ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ ದಾವಾ ಇತ್ಯರ್ಥವಾಗುವ ತನಕ ವಾದಿ, ಅವರ ಪರ ಎಜೆಂಟರು, ಕುಟುಂಬಸ್ಥರು, ನೌಕರರು, ವಾರಿಸುದಾರರು, ಆಡಳಿತದಾರರು ಅಥವಾ ಅವರ ಪರವಾಗಿ ಅಧಿಕಾರ ಪತ್ರ ಹೊಂದಿದವರು ದಾವಾ ಎ ಶೆಡ್ಯೂಲ್ ಸ್ವತ್ತಿನಲ್ಲಿರುವ ಶ್ರೀ ಪಡುವರಿ ವಿನಾಯಕ ದೇವಸ್ಥಾನ ಬ್ರಾಸ್ತ್ರಿ ಮಠ ವಡೇರಹೋಬಳಿ ಗ್ರಾಮದ ಪೂಜೆ ವಿನಿಯೋಗಕ್ಕೆ ಯಾವುದೇ ಅಡ್ಡಿ ಆತಂಕ ಮಾಡದಂತೆ ಮತ್ತು ಪ್ರತಿವಾದಿಯ ದಾವಾ ಎ ಶೆಡ್ಯೂಲ್ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭೋಗಕ್ಕೆ ಅಡ್ಡಿಪಡಿಸದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವನ್ನು ಕೋರಿರುತ್ತಾರೆ.

2. ಈ ಎರಡೂ ಮಧ್ಯಂತರ ಅರ್ಜಿಗಳನ್ನು ದಾವಾ ಸ್ವತ್ತಿನಲ್ಲಿರುವ ಶ್ರೀ ಪಡುವರಿ ವಿನಾಯಕ ದೇವಸ್ಥಾನದ ಕುರಿತು ಸಲ್ಲಿಸಿರುವುದರಿಂದ ಘಟನೆಗಳ ಪುನರಾವರ್ತನೆಯನ್ನು ತಪ್ಪಿಸಲು ಮತ್ತು ತದ್ವಿರುದ್ಧ ಅಭಿಪ್ರಾಯ ವ್ಯಕ್ತವಾಗುವುದನ್ನು ತಡೆಯಲು ಒಂದೇ ಆದೇಶ ಮಾಡಲು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

3(ಎ). ಮಧ್ಯಂತರ ಅರ್ಜಿ 2 ಕ್ಕೆ ಲಗತ್ತಾಗಿರುವ ಪ್ರಮಾಣ ಪತ್ರದಲ್ಲಿ ವಾದಿಯು ಕುಂದಾಪುರ ತಾಲೂಕು, ವಡೇರ ಹೋಬಳಿ ಗ್ರಾಮದ, ಪಡುವರಿ ವಿನಾಯಕ ದೇವಸ್ಥಾನದ ಸ.ನಂ. 101/10 ಬಿ ರಲ್ಲಿಯ ಖಾಯಂ ವಾಸಿಯಾಗಿರುತ್ತಾರೆ. ವಾದಿರು ಪಿತ್ರಾರ್ಜಿತವಾಗಿ ದಾವಾ ಶೆಡ್ಯೂಲ್ ಸ್ವತ್ತನ್ನು ಹೊಂದಿರುತ್ತಾರೆ. ಸದ್ರಿ ದಾವಾ ಸ್ವತ್ತಿನ ಸರ್ವೆ ನಂಬ್ರ 101/10 ರಲ್ಲಿ 0.37 ಎಕ್ರೆ ಸ್ಥಳವನ್ನು ದಿನಾಂಕ 02-12-1869 ರ ಮೂಲಗೇಣೀ ಚೀಟಿಯಂತೆ ವಾದಿರ ಪೂರ್ವಿಕರಾದ ರಾಮಕೃಷ್ಣ ಭಟ್ಟ ಬಿನ್ ಪುಟ್ಟಯ್ಯ ಭಟ್ಟ ರವರ ಹೆಸರಿಗೆ ಸ್ಥಾಪನಾ ನಂಬ್ರ 104 ಪಡುವರಿ ವಿನಾಯಕ ದೇವಸ್ಥಾನವನ್ನು ಒಳಗೊಂಡ ಸ್ಥಳವು ಬಂದಿರುತ್ತದೆ. ಸದ್ರಿ ಸ್ಥಳವನ್ನು 1944 ರಲ್ಲಿ ರಾಮ ಬ್ರಾಸ್ರಿ ಪೂಜೆಯ ಬಾಬ್ತು ರಾಮಕೃಷ್ಣ ಭಟ್ಟರಿಗೆ ಧರ್ಮ ಸಾಧನದ ಮೂಲಕ ಹಕ್ಕು ಸ್ಥಾಪನೆ ಮಾಡಿದ್ದು, ಸದ್ರಿ ವಿಚಾರವಾಗಿ ಮೃತ ರಾಮಕೃಷ್ಣ ಭಟ್ಟರ ಮಗ ಶೇಷ ಭಟ್ಟರ ಮಗ ಪಣಿಭಟ್ಟರವರು ದಾವಾ ನಂಬ್ರ 359/1907 ಸುಬ್ರಾಯ ಭಟ್ಟರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು, ಸದ್ರಿ ದಾವೆಯಲ್ಲಿನ ಪಟ್ಟಾ ನಂಬ್ರ 189 ರಂತೆ ಪಣಿಭಟ್ಟರವರ ಹೆಸರಿಗೆ ಹಕ್ಕು ಸ್ಥಾಪಿತವಾಗಿರುತ್ತದೆ. 1936 ರಲ್ಲಿ ದಾವಾ ನಂಬ್ರ 233/1936 ರಂತೆ ಪಣಿಭಟ್ಟರವರ ಮೂಲಿದಾರ ನರಸಿಂಹ ಹೊಳ್ಳರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು, ಪಣಿಭಟ್ಟರ ಪರ ತೀರ್ಪು ಆಗಿರುತ್ತದೆ. 1935 ರಲ್ಲಿ ಸಬ್ ಕಲೆಕ್ಟರ್ ಸಮಕ್ಷಮ ಎಮ್ ಆರ್ ಇ ಪಿ 67/1935 ರ ಆದೇಶದಂತೆ ದೇವಸ್ಥಾನದ ಹೆಸರು ಫಣಿಭಟ್ಟರ ಹೆಸರಿಗೆ ದಾಖಲಾಗುವಂತೆ ಆದೇಶವಾಗಿರುತ್ತದೆ. 1955 ರಲ್ಲಿ ದಾವಾ ನಂಬ್ರ 138/1955 ರಲ್ಲಿ ಪಣಿಭಟ್ಟರ ಮಗ ರಾಮಕೃಷ್ಣ ಭಟ್ಟರವರು ಮೂಲಿದಾರರಾದ ನರಸಿಂಹ ಹೊಳ್ಳರ ಮಗ ಸದಾಶಿವ ಹೊಳ್ಳ ವಿರುದ್ಧ ದಾವೆಯಲ್ಲಿಯೂ ರಾಮಕೃಷ್ಣ ಭಟ್ಟರ ಹೆಸರಿಗೆ ಹಕ್ಕು ಸ್ಥಾಪನೆಯಾಗಿರುತ್ತದೆ. 1973 ರವರಿಗೊ ರಾಮಕೃಷ್ಣ ಭಟ್ಟರ ಹೆಸರಿನಲ್ಲಿ ಖಾತೆ ಹಾಗೂ ಸ್ಥಳ ಸ್ಥಾಪಿತವಾಗಿರುತ್ತದೆ.

(ಬಿ) ಮುಂದುವರೆದು ನಂತರದಲ್ಲಿ ಕಾಡಾ ಯಾನೆ ನರಸಿಂಹ ಬ್ರಾಸ್ರಿ ಇವರು ದಾಖಲಾತಿ ಇಲ್ಲದೆ ಬರೆದ ವೀಲುನಾಮೆಯಲ್ಲಿ 0.37 ಎಕ್ರೆ ಸ್ಥಳವನ್ನು 0.20 ಮತ್ತು 0.17 ಎಂದು ಪ್ರತ್ಯೇಕೀಕರಿಸಿ 0.20 ಸ್ಥಳಕ್ಕೆ ಹಾಲಿ ಪ್ರತಿವಾದಿಯು ಹಕ್ಕುದಾನೆಂದು ಕಲಂ ನಂಬ್ರ 11 ರಲ್ಲಿಯ ದೇವಸ್ಥಾನದ ಉಂಬಳಿ ಸ್ಥಳ ಎಂದು ನಮೂದಿಸಿದ ವಿಚಾರವನ್ನು ಲೋಪಗೊಳಿಸಿಕೊಂಡಿದ್ದಾಗಿರುತ್ತದೆ. ದಾವಾ

ಸ್ವತ್ತಿನಲ್ಲಿರುವ ದೇವಸ್ಥಾನಕ್ಕೆ ಸಂಬಂಧಿಸಿದಂತೆ ವಾದಿರ ಕುಟುಂಬದವರು ತಸ್ತೀಕು ಪಡೆದುಕೊಳ್ಳುತ್ತಾ ಬಂದಿದ್ದು, ತಸ್ತೀಕ್ ನ್ನು ಈಗಲೂ ನೀಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ 02-12-1869 ರ ಮೂಲಗೇಣೀ ಚೀಟಿಯಂತೆ ಬಂದಿರುವ ಆಸ್ತಿ ಹಾಗೂ ದೇವಸ್ಥಾನವು ವಿನಾಯಕ ದೇವರ ಪೂಜೆ ಬಗ್ಗೆ ಅನಾದಿಕಾಲದ ಉಂಬಳಿಯನ್ನಾಗಿ ಕಾಣಿಸಿದಂತೆ ಸುಮಾರು 1980 ರ ಇಸವಿಯಿಂದಲೂ ವಾದಿರ ಪೂರ್ವಿಕರಾದ ರಾಮಕೃಷ್ಣ ಭಟ್ ರವರ 9 ನೇ ಕಾಲಂ ನಲ್ಲಿ ಹೆಸರು ನಮೂದಾಗಿದ್ದು, ಕಾಲಂ ನಂ 10 ರಲ್ಲಿ ಸ್ವಾಧೀನತೆ ರೀತಿಯನ್ನು ನಮೂದಿಸಿದ್ದು, ಸರ್ವೆ ನಂಬ್ರ 101/10 0.37 ರ ಬದಲಾಗಿ ಸ.ನಂ. 101/10 ಎ 0.20 ಎಕ್ರೆ ಮತ್ತು ಸ.ನಂ. 101/10 ಎ 0.17 ಎಕ್ರೆ ಎಂದು ನಮೂದಾಗಿರುತ್ತದೆ. ಪ್ರತಿವಾದಿರು ಸರ್ವೆ ನಂಬ್ರ 101/10 ಬಿ 0.20 ರಲ್ಲಿಯ ದೇವಸ್ಥಾನ ಹಾಗೂ ಖಾಲಿ ಸ್ಥಳವನ್ನು ಸ್ವಾಧೀನತೆ ಹೊಂದಲು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ ದಿನಾಂಕ 31-12-1985 ರ ತಮ್ಮ ಅಜ್ಜ ದಿ. ಕಾಡ ಯಾನೆ ನರಸಿಂಹ ಬ್ರಾಹ್ಮಿಯು ಬರೆದಿಟ್ಟ ವೀಲುನಾಮೆಯಂತೆ ಖಾತೆ ಬದಲಾವಣೆ ಮಾಡುವ ಸಮಯದಲ್ಲಿ ಮೂಲ ದಾಖಲಾತಿಯನ್ನು ಪರಿಶೀಲಿಸದೇ ವೀಲುನಾಮೆಯಲ್ಲಿ ನಮೂದಿಸಿದ ಕ್ರಯ ಪತ್ರಗಳಲ್ಲಿ ಸರ್ವೆ ನಂಬ್ರ 101/10 ಬಿ 0.20 ಎಕ್ರೆ ಸ್ಥಳವು ನಮೂಸದೇ ಇದ್ದಾಗ್ಯೂ ಸದ್ರಿ ವೀಲುನಾಮೆಯ ಊರ್ಜಿತದ ಬಗ್ಗೆ ಯಾವುದೇ ರೀತಿಯ ವಿಮರ್ಶೆ ಮಾಡದೇ ಮಾಡಿದ ಎಮ್ ಆರ್ ಆದೇಶವು ಕಾನೂನು ಬಾಹಿರವಾಗಿರುತ್ತದೆ. ವಾದಿಯು ವಿವಾದಿತ ವಿಲುನಾಮೆಯ ಮೇಲೆ ಪ್ರತಿವಾದಿರ ಹೆಸರಿಗೆ ಖಾತಾ ಬದಲಾವಣೆ ಮಾಡಿರುವುದನ್ನು ರದ್ದುಪಡಿಸುವರೇ ಹಾಗೂ ಕಂದಾಯ ಇಲಾಖೆಗಳಲ್ಲಿ ಅದೇಶದ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯ ಇರುವುದಿಲ್ಲವಾಗಿ ಹಿಂಬರಹ ನೀಡಿರುತ್ತಾರೆ. ರಾಜಸ್ವ ನಿರೀಕ್ಷಕರು ಮಾಡಿದ ಖಾತಾ ಬದಲಾವಣೆಯು ನ್ಯಾಯ ಸಮ್ಮತವಾಗಿರುವುದಿಲ್ಲ. ಆದ್ದರಿಂದ ಮಧ್ಯಂತರ ಅರ್ಜಿ 1 ನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

4. ಪ್ರತಿವಾದಿಯು ಮಧ್ಯಂತರ ಅರ್ಜಿ 2 ಕ್ಕೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

5. ಮಧ್ಯಂತರ ಅರ್ಜಿ 4 ಕ್ಕೆ ಲಗತ್ತಾದ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ವಾದಿ ತಮ್ಮ ವಾದ ಪತ್ರದಲ್ಲಿ ಶ್ರೀ ಪಡುವರಿ ವಿನಾಯಕ

ದೇವಸ್ಥಾನದ ಪೂಜೆಯನ್ನು ಪ್ರತಿವಾದಿ ಮಾಡಿಕೊಂಡು ಬರುತ್ತಿರುವುದಾಗಿ ಒಪ್ಪಿ ಕೊಂಡಿರುತ್ತಾರೆ. ಪ್ರತಿವಾದಿಯು ದಾವಾ ಎ ಶೆಡ್ಯೂಲ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ. ವಾದಿ ಮತ್ತು ಅವರ ಕುಟುಂಬಸ್ಥರು ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಮಾಡಲಾದ ಅಭಿವೃದ್ಧಿಯಿಂದ ಅಕ್ರಮ ಲಾಭ ಹೊಂದಲು ಪ್ರತಿವಾದಿಯನ್ನು ದಾವಾ ಸ್ವತ್ತಿನಿಂದ ಹೊರ ಹಾಕಲು ಪ್ರಯತ್ನಿಸಿರುತ್ತಾರೆ. ವಾದಿಗೆ ದಾವಾ ಸ್ವತ್ತಿನಲ್ಲಿರುವ ಯಾವುದೇ ಹಕ್ಕು ಮತ್ತು ಸ್ವಾ ಧೀನ ಇರುವುದಿಲ್ಲ. ಮಧ್ಯಂತರ ಅರ್ಜಿ ಪುರಸ್ಕೃತಗೊಳ್ಳದಿದ್ದರೆ ಪ್ರತಿವಾದಿಗೆ ಅಪಾರವಾದ ನಷ್ಟ ಉಂಟಾಗುತ್ತದೆ. ಒಂದು ವೇಳೆ ಈ ಅರ್ಜಿ ಪುರಸ್ಕೃತಗೊಂಡರೆ ಪ್ರತಿವಾದಿಗೆ ಯಾವುದೇ ನಷ್ಟ ಆಗುವುದಿಲ್ಲ. ಆದ್ದರಿಂದ ಮಧ್ಯಂತರ ಅರ್ಜಿ 4 ನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

**6.** ವಾದಿರು ಮಧ್ಯಂತರ ಅರ್ಜಿ 4 ಕ್ಕೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಪ್ರತಿವಾದಿಯ ನಿಲುವನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಪ್ರತಿವಾದಿರು ಕಂದಾಯ ಇಲಾಖೆಯಲ್ಲಿ ಶ್ರೀ ಲಕ್ಷ್ಮೀ ವೆಂಕಟರಮಣ ಶ್ರೀ ದುರ್ಗಾ ಶ್ರೀ ದಶಭುಜ ವಿನಾಯಕ ದೇವಸ್ಥಾನ ಎನ್ನುವ ಅಸ್ತಿತ್ವದಲ್ಲಿ ಇಲ್ಲದ ದೇವಸ್ಥಾನದ ಹೆಸರನ್ನು ಹೇಳಿಕೊಂಡು ಹಣ ರೂ. 8,25,000-00 ವನ್ನು ಮಂಜೂರು ಮಾಡಿಸಿಕೊಂಡು ಹಾಲೀ ವಾದಿರ ಸ್ವಾಧೀನತೆ ಹಕ್ಕಿನ ಶ್ರೀ ಪಡುವರಿ ವಿನಾಯಕ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡಲು ಪ್ರಯತ್ನ ಪಡುತ್ತಿರುವುದಾಗಿದೆ. ವಾದಿರು ಎಂದಿಗೂ ಕೂಡ ಪ್ರತಿವಾದಿರ ಸ್ವಾಧೀನತೆಯನ್ನು ಒಪ್ಪಿಕೊಂಡಿರುವುದಿಲ್ಲ. ಪ್ರತಿವಾದಿರು ಹೇಳಿದಂತೆ ತಮ್ಮ ಸ್ವಂತಕ್ಕಾಗಿ ದೇವರ ಪೂಜೆಯನ್ನು ಮಾಡುವರೇ ವಾದಿರು ಅಡ್ಡಿ ಆತಂಕಪಡಿಸಿರುವುದಲ್ಲ. ಪ್ರತಿವಾದಿರು ಕೂಡ ವಾದಿರ ಪೂಜಾ ಕಾರ್ಯಗಳಿಗೆ ಅಡ್ಡಿ ಆತಂಕ ಪಡಿಸಿರುವುದಿಲ್ಲ. ಈ ಹಿಂದಿನಿಂದಲೂ ವಾದಿರು ಹಾಗೂ ಪ್ರತಿವಾದಿರ ಪೂರ್ವಿಕರು 6 ತಿಂಗಳಿಗೊಬ್ಬರಂತೆ ಪೂಜೆ ಮಾಡಿಕೋಂಡು ಬರುತ್ತಿದ್ದು, ಅದರಂತೆಯೇ ವಾದಿರು ಹಾಗೂ ಪ್ರತಿವಾದಿರು ಪೂಜಾ ಕಾರ್ಯಗಳನ್ನು ಮಾಡಿಕೊಂಡು ಬಂದಿರುವುದಾಗಿದೆ. ಪ್ರತಿವಾದಿರು ವಾದಿರು ಮಾಡಿದ ಪೂಜಾಲಂಕಾರಗಳನ್ನು ತೆಗೆದು ಪುನಃ ಪೂಜೆ ಮಾುತ್ತಿದ್ದಲ್ಲದೇ ದೇವಸ್ಥಾನಕ್ಕೆ ಬೀಗ ಹಾಕಿಕೊಂಡು ಹೋಗುತ್ತಿರುವುದರಿಂದ ವಾದಿರಿಗೆ ಹಾಗೂ ವಾದಿರ ಮನೆಯವರಿಗೆ ದೇವಸ್ಥಾನದೊಳಗೆ ಹೋಗಲು ಅನಾನುಕೂಲವಾಗಿರುತ್ತದೆ. ದೇವಸ್ಥಾನದ ಆಡಳಿತ ಅಭಿವೃದ್ಧಿ ಹಾಗೂ ತಸ್ತೀಕ್ ವಿಚಾರಗಳಿಗೆ ಪ್ರತಿವಾದಿರಿಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ

ಅದನ್ನು ಸ್ಥಾಪಿಸಿಕೊಳ್ಳುವರೇ ಮೋಸಕೃತ್ಯದ ದಾಖಲಾತಿಗಳ ಮೂಲಕ ಕಂದಾಯ ಇಲಾಖೆಗಳಿಗೆ ತಪ್ಪು ಮಾಹಿತಿ ನೀಡಿ ಆಮಿಷ ತೋರಿಸಿ ದೇವಸ್ಥಾನದ ಹಾಗೂ ದೇವಸ್ಥಾನದ ಹತ್ತಿರ ಸ್ಥಳವನ್ನು ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡು ವಾದಿರಿಗೆ ತೊಂದರೆ ನೀಡುತ್ತಿರುವುದರಿಂದ ದಾವೆಯನ್ನು ಸಲ್ಲಿಸಲಾಗಿರುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿ 1 ನ್ನು ವಜಾಗೊಳಿಸಬೇಕಾಗಿ ಕೋರಿರುತ್ತಾರೆ.

7. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ಅವರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

8. ಮೇಲ್ಕಂಡ ಅರ್ಜಿಯ ಮತ್ತು ತಕರಾರಿನ ಅಂಶಗಳನ್ನು ಪರಿಗಣಿಸಿದಾಗ, ಈ ಕೆಳಕಂಡಂತಹ ಅಂಶಗಳು ಉದ್ಭವಿಸಿರುತ್ತದೆ.

**ಅಂಶಗಳು**

1. **ವಾದಿಯು ತಮಗೆ ಮೇಲ್ನೋಟಕ್ಕೆ ಸಾಬೀತಾಗುವಂತಹ ದಾವೆ ಇರುತ್ತದೆ ಎಂದು ಸಾಬೀತುಪಡಿಸುವರೇ?**
2. ಪ್ರತಿವಾದಿಯು **ತಮಗೆ ಮೇಲ್ನೋಟಕ್ಕೆ ಸಾಬೀತಾಗುವಂತಹ ದಾವೆ ಇರುತ್ತದೆ ಎಂದು ಸಾಬೀತುಪಡಿಸುವರೇ?**
3. **ವಾದಿಯ ಪರವಾಗಿ ಅನುಕೂಲತೆ ಒಲವು ಇರುತ್ತದೆ ಎಂದು ಸಾಬೀಸುಪಡಿಸುವರೇ?**
4. ಪ್ರತಿವಾದಿಯು ತಮ್ಮ **ಪರವಾಗಿ ಅನುಕೂಲತೆ ಒಲವು ಇರುತ್ತದೆ ಎಂದು ಸಾಬೀಸುಪಡಿಸುವರೇ?**
5. **ವಾದಿಯು ಮಧ್ಯಂತರ ಅರ್ಜಿ ತಿರಸ್ಕರಿಸಲ್ಪಟ್ಟಲ್ಲಿ ಅಪರಿಹಾರವಾದ ನಷ್ಟ ಉಂಟಾಗುತ್ತದೆ ಎಂದು ಸಾಬೀತುಪಡಿಸುವರೇ?**
6. ಪ್ರತಿವಾದಿಯು **ಮಧ್ಯಂತರ ಅರ್ಜಿ ತಿರಸ್ಕರಿಸಲ್ಪಟ್ಟಲ್ಲಿ ಅಪರಿಹಾರವಾದ ನಷ್ಟ ಉಂಟಾಗುತ್ತದೆ ಎಂದು ಸಾಬೀತುಪಡಿಸುವರೇ?**
7. **ಆದೇಶ ಏನು?**

9. ಮೇಲ್ಕಾಣಿಸಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ:

ಅಂಶ-1 : ನಕಾರಾತ್ಮಕವಾಗಿ
ಅಂಶ-2 : ಸಕಾರಾತ್ಮಕವಾಗಿ
ಅಂಶ-3 : ನಕಾರಾತ್ಮಕವಾಗಿ
ಅಂಶ-4 : ಸಕಾರಾತ್ಮಕವಾಗಿ
ಅಂಶ-5 : ನಕಾರಾತ್ಮಕವಾಗಿ
ಅಂಶ-6 : ಸಕಾರಾತ್ಮಕವಾಗಿ
ಅಂಶ-7 : ಅಂತಿಮ ಆದೇಶದಂತೆ

## ಕಾರಣಗಳು

10. ಅಂಶ-1 ಮತ್ತು 2: ವಾದಿಯು ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತಿನಲ್ಲಿರುವ ಸ್ಥಾಪನಾ ಸಂಖ್ಯೆ 104 ಶ್ರೀ ಪಡುವರಿ ವಿನಾಯಕ ದೇವಸ್ಥಾನಕ್ಕೆ ಹಸ್ತಕ್ಷೇಪ ಮಾಡದಂತೆ ಮತ್ತು ಯಾವುದೇ ರೀತಿಯ ಕಟ್ಟಡ ನಿರ್ಮಿಸದಂತೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ.

11. ವಾದಿಯ ನಿರ್ದಿಷ್ಟ ಪ್ರಕರಣ ಏನೆಂದರೆ ವಾದಿಯ ಪೂರ್ವಿಕರಾದ ರಾಮಕ್ಷಷ್ಣ ಭಟ್ ಬಿನ್ ಪುಟ್ಟಯ್ಯ ಭಟ್ ರವರು ದಾವಾ ಸ್ವತ್ತಿನ ಸರ್ವೇ ನಂಬ್ರ 101/10 ರಲ್ಲಿ 0.37 ಎಕ್ರೆಯನ್ನು, ಸ್ಥಾಪನಾ ಸಂಖ್ಯೆ 104 ಶ್ರೀ ಪಡುವರಿ ವಿನಾಯಕ ದೇವಸ್ಥಾನವನ್ನು ಒಳಗೊಂಡಂತೆ ದಿನಾಂಕ 02-12-1869 ರ ಮೂಲಗೇಣಿ ಚೀಟಿಯಂತೆ ಪಡೆದಿರುತ್ತಾರೆ. 1944 ರಲ್ಲಿ ರಾಮಕೃಷ್ಣ ಭಟ ರವರ ಹೆಸರಿಗೆ ಬ್ಯಾಪ್ರಿ ಪೂಜೆಯ ಬಾಬ್ತು ಹಕ್ಕು ಪ್ರಾಪ್ತಿಯಾಗಿರುತ್ತದೆ. ವಾದಿಗೆ ದಾವಾ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಪ್ರತಿವಾದಿಯ ಅಜ್ಜ ಕಾಡಾ ಯಾನೆ ನರಸಿಂಹ ಬ್ಯಾಪ್ರಿ ಯಾವುದೇ ದಾಖಲೆ ಇಲ್ಲದೆ ದಾವಾ ಸರ್ವೆ ನಂಬ್ರ 101/10 ರಲ್ಲಿ 0.37 ಎಕ್ರೆಯನ್ನು ಪ್ರತ್ಯೇಕಿಸಿ 0.20 ಎಕ್ರೆಯನ್ನು ಪ್ರತಿವಾದಿಗೆ ವೀಲುನಾಮೆ ಮಾಡಿರುತ್ತಾರೆ. ಪ್ರತಿವಾದಿಯ ತಂದೆ ದೇವಸ್ಥಾನದ ಪೂಜೆ ನಿರ್ವಹಿಸುತ್ತಿದ್ದು, ಅವರ ನಂತರ ಪ್ರತಿವಾದಿ ಮುಂದುವರೆಸಿಕೊಂಡು ಬಂದಿರುತ್ತಾರೆ. ದೇವಸ್ಥಾನದ ತಸ್ತೀಕ್ ವಾದಿರ ಕುಟುಂಬದವರೇ ಪಡೆದುಕೊಳ್ಳುತ್ತಿದ್ದರು. 1980 ರಿಂದಲೂ ವಾದಿಯ ಪೂರ್ವಿಕರಾದ ರಾಮಕ್ಷಷ್ಣ ಭಟ್ ರವರ ಹೆಸರು ಪಹಣಿಯ ಸ್ವಾಧೀನತೆಯ ಕಾಲಂ ನಲ್ಲಿ ಇತ್ತು. ಪ್ರತಿವಾದಿ ದಾವಾ ಸ್ವತ್ತಿನಲ್ಲಿನ ದೇವಸ್ಥಾನ ಮತ್ತು ಖಾಲಿ ಸ್ಥಳ ಸ್ವಾಧೀನತೆ ಹೊಂದಲು ಕಂದಾಯ ಅಧಿಕಾರಿಗಳಿಗೆ ತಪ್ಪು

ಮಾಹಿತಿ ನೀಡಿ ವೀಲುನಾಮೆಯ ಮೂಲಕ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ.

**12.** ಪ್ರತಿವಾದಿಯ ನಿಲುವು ಏನೆಂದರೆ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ತಮಗೂ ಪೂರ್ವದಲ್ಲಿ ದಾವಾ ಸ್ವತ್ತಿನಲ್ಲಿರುವ ಪಡುವರಿ ವಿನಾಯಕ ದೇವಸ್ಥಾನ ಪೂಜೆಯನ್ನು ತಮ್ಮ ಅಜ್ಜ ನರಸಿಂಹ ಬ್ಯಾಸ್ತ್ರಿ ರವರು ಮಾಡಿಕೊಂಡು ಬಂದಿರುತ್ತಾರೆ. ಅವರ ನಂತರ ಪ್ರತಿವಾದಿಯವರ ತಂದೆ ಪೂಜಾ ವಿನಿಯೋಗವನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಪ್ರತಿವಾದಿಯವರ ಅಜ್ಜ ದಿವಂಗತ ಕಾಡಾ ಯಾನೆ ನರಸಿಂಹ ಬ್ಯಾಸ್ತ್ರಿ ವೀಲುನಾಮೆ ಮೂಾಲಕ ತಾವು ಹೊಂದಿರುವ ಮೂಲ್ಗೇಣಿ ಹಕ್ಕು ಮತ್ತು ದಾವಾ ಸ್ವತ್ತನ್ನು ಪ್ರತಿ ವಾದಿಗೆ ನೀಡಿರುತ್ತಾರೆ. ವೀಲುನಾಮೆ ಆಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿರುತ್ತದೆ. ವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ.

**13.** ಉಭಯ ಪಕ್ಷಕಾರರು ಹಾಜಾರು ಪಡಿಸಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ದಿನಾಂಕ 02-12-1869 ರ ದಾನಮತಿಯ ಮೂಲಗೇಣಿ ಚೀಟಿಯಂತೆ ರಾಮಕೃಷ್ಣ ಭಟ್ಟರಿಗೆ ಸುಬ್ರಾಯ ಹೊಳ್ಳ ಬಿನ್ ಲಕ್ಷುಮಯ ಹೊಳ್ಳರ ಮೂಲಕ ಜಂಜ್ರಾ ನಂ. 1 ಬಂದಿರುತ್ತದೆ. ಷದ್ರಿ ದಾಖಲೆಯಲ್ಲಿ "ವಡೇರಹೋಬಳಿ ಪಡುಮಟದ ವಿನಾಯಕ ದೇವರಿಗೆ ಅಧಿಕಾರಕ್ಕೆ ಬಿಟ್ಟು ಅನುಭವಿಸಿ ಬರುತ್ತಿದ್ದ ನಿಮ್ಮ ಮಾವ ರಾಮ್ಯೆ ಬ್ಯಾಸ್ತ್ರಿ ಇಂದಲೂ ಕ್ರೋದಿ ಸಂವತ್ಸರದ ಜೇಷ್ಠ ದರ್ಮ ಮೂಲಕ ಹಿಂದಿನಿಂದ ಬಂದಿರುವಂತೆ ನೀವು ಅನುಭವಿಸಿಕೊಂಡು ಬರುತ್ತಿರುವ ಸ್ಥಳವನ್ನು ನಾನು ಮೂಲಗೇಣಿಗೆ ಪಡೆದುಕೊಂಡ ಸ್ಥಳ" ಎಂದು ನಮೂದಾಗಿದ್ದು, ಸದರಿ ದಾಖಲಾತಿಯಲ್ಲಿ ಮೂಲಗೇಣಿಗೆ ಪಡೆದ ಸ್ಥಳದ ಸರ್ವೇ ನಂಬರ್ ಆಗಲೀ, ವಿಸ್ತೀರ್ಣವಾಲೀ ಅಥವಾ ದೇವಸ್ಥಾನದ ಮೇಲೆ ಹಕ್ಕು ಪ್ರಾಪ್ತಿಯಾಗಿದೆ ಎಂಬ ಬಗ್ಗೆ ಉಲ್ಲೇಖವಿಲ್ಲ.

**14.** ಪಣಿಯಪ್ಪ ಭಟ್ಟ ಬಿನ್ ಶೇಷ ಭಟ್ಟ ರವರು ನರಸಿಂಹ ಹೊಳ್ಳ ಬಿನ್ ಸುಬ್ರಾಯ ಹೊಳ್ಳ ರವರ ವಿರುದ್ಧ ಮೂಲಗೇಣಿ ಬಾಡಿಗೆಯ ಮತ್ತು ಬಡ್ಡಿಯ ವಸೂಲಾತಿಗಾಗಿ ಅಸಲುದಾವೆ 232/1936 ರಂತೆ ದಾವೆಯನ್ನು

ಹೂಡಿದ್ದು, ಆ ದಾವೆ ರಾಜಿ ಮೂಲಕ ಕೊನೆಗೂಂಡಿರುತ್ತದೆ. ಆ ರಾಜಿ ಪ್ರಕಾರ ಪ್ರತಿವಾದಿಯಾದ ನರಸಿಂಹ ಹೊಳ್ಳ ಮೂಲಗೇಣಿ ಬಾಬ್ತು ಬಾಕಿ ಇರುವ ಬಾಡಿಗೆ ಹಣವನ್ನು ನೀಡಲು ಒಪ್ಪಿ ಕೊಂಡಿರುತ್ತಾರೆ. ಪಣಿಯಪ್ಪಭಟ್ಟ ಬಿನ್ ಶೇಷ ಭಟ್ಟ ರವರು ನರಸಿಂಹ ಹೊಳ್ಳರ ಮಗ ಸದಾಶಿವಹೊಳ್ಳರ ವಿರುದ್ಧ ಅಸಲು ದಾವೆ 138/1955 ರಂತೆ ಮೂಲಗೇಣಿ ಬಾಡಿಗೆ ವಸೂಲಾತಿಗಾಗಿ ದಾವೆ ಸಲ್ಲಿಸಿದ್ದು, ಸದರಿ ದಾವೆಯು ಡಿಕ್ರಿಯಾಗಿರುತ್ತದೆ. ಈ ಎರಡೂ ದಾವೆಗಳಲ್ಲಿ ಪ್ರತಿವಾದಿಯಾಗಲೀ ಅಥವಾ ಪ್ರತಿವಾದಿ ಕುಟುಂಬದವರಾಗಲೀ ಪಕ್ಷಗಾರರಲ್ಲ ಮತ್ತು ವಾದಿ ಹಾಜಾರುಪಡಿಸಿರುವ ಈ ಎರಡೂ ದಾವೆಗೆ ಸಂಬಂಧಿಸಿದ ದಾಖಲೆಗಳಲ್ಲಿ ಸ್ವತ್ತಿನ ಸರ್ವೇ ನಂಬರ್ ವಿಸ್ತೀರ್ಣ ಯಾವುದರ ಬಗ್ಗೆಯೂ ವಿವರಣೆ ಇರುವುದಿಲ್ಲ.

**15.** ರಾಮಕೃಷ್ಣ ಭಟ್ಟ ತಮ್ಮ ಹೆಂಡತಿ ಸರಸ್ವತಿ ಭಟ್ಟರವರಿಗೆ ತಾವು ಹೊಂದಿರುವ ಮೂಲ ಹಕ್ಕಿನ ಸ್ಥಳವಾದ ಸರ್ವೇ ನಂಬ್ರ 101/1 ಎ, 0.17 ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಿನಾಂಕ 1/1/1997 ರ ವಿಲುನಾಮೆ ಮಾಡಿರುತ್ತಾರೆ. ರಾಮಕೃಷ್ಣ ಭಟ್ ರವರು ದಿನಾಂಕ 10/3/1997 ರಂದು ಮೃತಪಟ್ಟಿರುತ್ತಾರೆ. ರಾಮಕೃಷ್ಣ ಭಟ್ ರ ಮರಣಾನಂತರ ಸರಸ್ವತಿ ಭಟ್ಟರು ತಾವು ವೀಲುನಾಮೆ ಮೂಲಕ ಹೊಂದಿದ ಸ್ವತ್ತುಗಳನ್ನು ತಮ್ಮ ಅಕ್ಕನ ಮಗಳು ವಾದಿಗೆ ದಿನಾಂಕ 27-05-2014 ರ ವೀಲುನಾಮೆ ಮೂಲಕ ನೀಡಿರುತ್ತಾರೆ. ಸರಸ್ವತಿ ಭಟ್ಟರು ದಿನಾಂಕ 27-09-2018 ರಲ್ಲಿ ಮೃತಪಟ್ಟಿರುತ್ತಾರೆ. ಈ ಎರಡೂ ವೀಲುನಾಮೆಯಲ್ಲಿ ದಾವಾ ಸ್ವತ್ತಿನ ಬಗ್ಗೆ ಅಥವಾ ದಾವಾ ಸ್ವತ್ತಿನಲ್ಲಿರುವ ದೇವಸ್ಥಾನದ ಬಗ್ಗೆಯಾಗಲೀ ಉಲ್ಲೇಖಿಸಿಲ್ಲ.

**16.** ಕಾಡಾ ಯಾನೆ ನರಸಿಂಹ ಬ್ರಾಪ್ರಿ ದಿನಾಂಕ 31-12-1985 ರ ವೀಲುನಾಮೆ ಮೂಲಕ ಪ್ರತಿವಾದಿಗೆ ದಾವಾ ಸ್ವತ್ತನ್ನು ಇತರೆ ಸ್ವತ್ತುಗಳನ್ನು ನೀಡಿರುತ್ತಾರೆ. ವಿಲೂನಾಮೆಯಲ್ಲಿ ದಿನಾಂಕ 24-05-1958 ಮತ್ತು 16-07-1965 ರಲ್ಲಿ ಕ್ರಯಕ್ಕೆ ಪಡೆದ ಸ್ವತ್ತುಗಳು ಮತ್ತು ವಡೇರಹೋಬಳಿ ಗ್ರಾಮದಲ್ಲಿ ಖಾತಾ 431 ಕ್ಕೆ ಸಂಬಂಧಪಟ್ಟ ಆಸ್ತಿಗಳು ನನ್ನ ಇಚ್ಛಾನುಸಾರ ಹಕ್ಕಿನವುಗಳಾಗಿರುತ್ತದೆ. "ವಡೇರಹೋಬಳಿ ಗ್ರಾಮದಲ್ಲಿರುವ ಸ್ಥಾಪನಾ ನಂಬ್ರ 104 ನೇ ಶ್ರೀ ವಿನಾಯಕ ದೇವರ ಪೂಜೆಯನ್ನು ನಾನು ಮಾಡಿಕೊಂಡು, ಆಡಳಿತ ವಗೈರೆಯನ್ನು ನೋಡಿಕೊಂಡು ಬಂದಿರುತ್ತೇನೆ" ಎಂದು ನಮೂದಾಗಿರುತ್ತದೆ.

**17.** ಪ್ರತಿವಾದಿ ದಾವಾ ಸ್ವತ್ತಿನ ದೇವಸ್ಥಾನಕ್ಕೆ ಸಂಬಂಧಿಸಿದ ತಸ್ತೀಕನ್ನು ತಮಗೆ ಮಂಜೂರು ಮಾಡುವಂತೆ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ವಾದಿಯು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ ಶ್ರೀ ದುರ್ಗಾ ಶ್ರೀ ದಶಲಕ್ಷ್ಮೀ ವಿನಾಯಕ ದೇವಸ್ಥಾನ ಬ್ರಾಸ್ರಿ ಮಠ ವಡೇರಹೋಬಳಿ ದೇವಸ್ಥಾನದ ಅಭಿವೃದ್ಧಿಗೆ ಮತ್ತು ಬೋಜನಶಾಲೆ ನಿರ್ಮಾಣಕ್ಕಾಗಿ ಅನುದಾನ ಮಂಜೂರಾತಿಗೆ ಕೋರಿಕೆಯನ್ನು ಸಲ್ಲಿಸಿರುತ್ತಾರೆ. ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನೀಯರು ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಯ ಪ್ರಕಾರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗೆ 2 ಲಕ್ಷ ಮಂಜೂರಾಗಿರುತ್ತದೆ. ಪ್ರತಿವಾದಿಯು ಸದರಿ ಮಂಜೂರಾತಿಯನ್ನು ಪಡೆದುಕೊಂಡ ಬಗ್ಗೆ ರಿಸೀದಿಯನ್ನು ನೀಡಲಾಗಿರುತ್ತದೆ. ಪ್ರತಿವಾದಿಯು ದೇವಸ್ಥಾನ ಅಭಿವೃದ್ಧಿ ಕಾರ್ಯಗಳಿಗಾಗಿ ದೇವಸ್ಥಾನದ ಅಭಿವೃದ್ಧಿ ಸಮಿತಿಗೆ ಹಸ್ತಾಂತರಿಸಿ ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ. ಪ್ರತಿವಾದಿಯ ಅಧ್ಯಕ್ಷತೆಯಲ್ಲಿ ದೇವಸ್ಥಾನದ ಅಭಿವೃದ್ಧಿ ಕುರಿತು ಸಭೆಯ ನಡುವಳಿ ಕೂಡ ನಡೆಸಲಾಗಿರುತ್ತದೆ. ಪುರಸಭೆಯಿಂದ ದೇವಸ್ಥಾನದ ಅಭಿವ್ರದ್ಧಿ ಕಾರ್ಯದ ಕುರಿತು ನಿರಪೇಕ್ಷಣಾ ಪತ್ರವನ್ನು ನೀಡಲಾಗಿರುತ್ತದೆ. ಸದರಿ ದೇವಸ್ಥಾನದ ಹೆಸರಿನಲ್ಲಿ ಕರ್ನಾಟಕ ಬ್ಯಾಂಕಿನಲ್ಲಿ ಖಾತೆ ಇರುತ್ತದೆ.

**18.** ಪ್ರಸ್ತುತ ದಾವಾ ಸ್ವತ್ತಿನಲ್ಲಿ ಶ್ರೀ ಪಡುವರಿ ವಿನಾಯಕ ದೇವಸ್ಥಾನ ಇರುವ ಬಗ್ಗೆ ಉಭಯಪಕ್ಷಗಾರರಿಗೆ ಯಾವುದೇ ವಿವಾದವಿಲ್ಲ. ದಾವಾ ಸ್ವತ್ತಿನ ಪಹಣಿಯ ಮಾಲೀಕರು ಮತ್ತು ಸ್ವಾಧೀನದಾರರ ಕಾಲಂಗಳಲ್ಲಿ ಪ್ರತಿವಾದಿಯ ಹೆಸರಿನಲ್ಲಿದೆ. ಮ್ಯುಟೇಷನ್ ರೆಜಿಸ್ಟರ್ ನಲ್ಲಿ ವೀಲುನಾಮೆಯ ಅಧಾರದ ಮೇಲೆ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿದ್ದು, ವಿನಾಯಕ ದೇವಸ್ಥಾದ ದೇವರ ಪೂಜೆಯ ಬಗ್ಗೆ ಅನಾದಿಕಾಲದಿಂದಲೂ ಉಂಬಳಿ ಎಂಬುದನ್ನು ಲೋಪಪಡಿಸಲಾಗಿರುತ್ತದೆ. ಈ ಮೆಲೆ ಚರ್ಚಿಸಲಾದ ಎಲ್ಲಾ ದಾಖಲೆಗಳಿಂದ ದಾವಾ ಸ್ವತ್ತು ಪ್ರತಿವಾದಿಯ ಸ್ವಾಧೀನದಲ್ಲಿದ್ದು ಪ್ರತಿವಾದಿಯು ದಾವಾಸ್ವತ್ತಿನಲ್ಲಿರುವ ದೇವಸ್ಥಾನದ ಅಧ್ಯಕ್ಷರೆಂಬುದಾಗಿ ಮೇಲುನೋಟಕ್ಕೆ ಕಂಡುಬಂದಿರುತ್ತದೆ. ವಾದಿಯ ಕುಟುಂಬದವರಿಗೆ ದಾವಾ ಸ್ವತ್ತು ಅಥವಾ

ದಾವಾ ಸ್ವತ್ತಿನಲ್ಲಿರುವ ದೇವಸ್ಥಾನದ ಮೇಲೆ ಹಕ್ಕು ಪ್ರಾಪ್ತಿಯಾಗಿರುವುದಾಗಿ ಮೂಲಗೇಣೀ ಚೀಟಿಯಲ್ಲಿ ಉಲ್ಲೇಖವಿಲ್ಲ.

**19.** ವಾದಿ ತಮ್ಮ ಕುಟುಂಬದವರು ತಸ್ತೀಕ ಪಡೆಯುತ್ತಿದ್ದು 1973 ರಿಂದಲೂ ರಾಮಕೃಷ್ಣ ಭಟ್ಟರ ಹೆಸರಿನಲ್ಲಿ ಪಹಣಿ ಇತ್ತು ಎಂಬುದಾಗಿ ನಿಲುವು ತೆಗೆದುಕೊಂಡಿರುತ್ತಾರೆ. ಆದರೆ ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ವಾದಿಯು ಹಾಜರು ಪಡಿಸಿರುವ ದಾಖಲಾತಿಗಳಿಂದ ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನತೆ ಹೊಂದಿರುವುದಾಗಿ ಕಂಡುಬಂದಿರುವುದಿಲ್ಲ. ಅಲ್ಲದೆ ಸ್ವತಃ ವಾದಿಯೆ ತಮ್ಮ ವಾದಪತ್ರ ಖಂಡಿಕೆ 2 ರಲ್ಲಿ ಪ್ರತಿವಾದಿಯ ತಂದೆ ಪಡುವರಿ ವಿನಾಯಕ ದೇವಸ್ಥಾನದ ಪೂಜೆಯನ್ನು ನಿರ್ವಹಿಸುತ್ತಿದ್ದು, ನಂತರದಲ್ಲಿ ಪ್ರತಿವಾದಿಯು ದೇವರ ಪೂಜೆ ನಡೆಸಿಕೊಂಡು ಬಂದಿರುವುದಾಗಿ ಒಪ್ಪಿಕೊಂಡಿರುತ್ತಾರೆ. ವಾದಿಯು ತಮ್ಮ ಪರವಾಗಿ ಮೇಲುನೋಟದ ದಾವೆ ಇರುವುದಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಮತ್ತು ಪ್ರತಿವಾದಿಯು ತಮ್ಮ ಪರವಾಗಿ ಮೇಲುನೋಟದ ದಾವೆ ಇರುವುದಾಗಿ ಸಾಬೀತುಪಡಿಸುವಲ್ಲಿ ಸಫಲರಾಗಿರುತ್ತಾರೆ. ಆದ್ದರಿಂದ ಅಂಶ - 1 ನ್ನು ನಕಾರಾತ್ಮಕವಾಗಿ ಮತ್ತು ಅಂಶ 2 ನ್ನು ಸಕಾರಾತ್ಮಕಾಗಿ ಉತ್ತರಿಸಿದೆ.

**20.** **<u>ಅಂಶಃ 3 ಮತ್ತು 4:-</u>** ಅಂಶ 1 ಮತ್ತು 2 ರಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಪ್ರತಿವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇರುವುದಾಗಿ ಸಾಬೀತುಪಡಿಸುವಲ್ಲಿ ಸಫಲರಾಗಿರುವುದರಿಂದ ಅನುಕೂಲತೆಯ ಒಲವು ಪ್ರತಿವಾದಿಯ ಕಡೆ ಇರುತ್ತದೆ. ಆದ್ದರಿಂದ ಅಂಶ - 3 ನ್ನು ನಕಾರಾತ್ಮಕವಾಗಿ ಮತ್ತು ಅಂಶ 4 ನ್ನು ಸಕಾರಾತ್ಮಕಾಗಿ ಉತ್ತರಿಸಿದೆ.

**21.** **<u>ಅಂಶ 5 ಮತ್ತು 6:</u>** ಅಂಶ-1 ಮತ್ತು 2 ರಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಪ್ರತಿವಾದಿಯು ತಮ್ಮ ಪರವಾಗಿ ಮೇಲು ನೋಟದ ದಾವೆ ಇರುವುದಾಗಿ ಸಾಬೀತು ಪಡಿಸುವಲ್ಲಿ ಸಫಲರಾಗಿರುವುದರಿಂದ ಅರ್ಜಿ ಪುರಸ್ಕೃತಗೊಳ್ಳದಿದ್ದರೆ ವಾದಿಗಿಂತ ಪ್ರತಿವಾದಿಗೆ ಅಪಾರವಾದ ನಷ್ಟ ಉಂಟಾಗುತ್ತದೆ. ಆದ್ದರಿಂದ ಅಂಶ - 5 ನ್ನು ನಕಾರಾತ್ಮಕವಾಗಿ ಮತ್ತು ಅಂಶ 6 ನ್ನು ಸಕಾರಾತ್ಮಕಾಗಿ ಉತ್ತರಿಸಿದೆ.

**22.** **<u>ಅಂಶ 7</u>:** ಅಂಶ-1 **ರಿಂದ** 6 **ರಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಈ ಕೆಳಕಂಡಂತೆ ಆದೇಶ ನೀಡಲಾಗಿದೆ:**

**ಆದೇಶ**

ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2ರ ರೀತ್ಯಾ ಸಲ್ಲಿಸಿರುವ ಮಧ್ಯಂತರ ಅರ್ಜಿ - 2 ನ್ನು ವಜಾಗೊಳಿಸಲಾಗಿದೆ.

ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರ ರೀತ್ಯಾ ಸಲ್ಲಿಸಿರುವ ಮಧ್ಯಂತರ ಅರ್ಜಿ - 4 ನ್ನು ಪುರಸ್ಕರಿಸಲಾಗಿದೆ.

ವಾದಿರು, ಅವರ ಕುಟುಂಬಸ್ಥರು, ಏಜೆಂಟರು, ವಾರಿಸುದಾರರು ಅಥವಾ ಅವರ ಕಡೆಯವರು ಯಾರೇ ಆಗಲಿ ದಾವಾ ಇತ್ಯರ್ಥವಾಗುವವರೆಗೆ ದಾವಾ ಸ್ವತ್ತಿನಲ್ಲಿರುವ ಶ್ರೀ ಪಡುವರಿ ವಿನಾಯಕ ದೇವಸ್ಥಾನದ ಪೂಜೆ ವಿನಿಯೋಗಕ್ಕೆ ಅಡ್ಡಿಪಡಿಸದಂತೆ ಮತ್ತು ಪ್ರತಿವಾದಿಯ ದಾವಾ ಎ ಶೆಡ್ಯೂಲ್ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭೋಗಕ್ಕೆ ಅಡ್ಡಪಡಿಸದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಆದೇಶಿಸಲಾಗಿದೆ.

ಖರ್ಚಿನ ಬಗ್ಗೆ ಆದೇಶವಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟಿದ್ದು ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 27 ನೇ ಫೆಬ್ರವರಿ 2025 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

(ರೋಹಿಣಿ.ಡಿ)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಕುಂದಾಪುರ.